*Clauses 2 to 8 both inclusive were added to the Bill.*

*Clause 1 etc.,*

MR. CHAIRMAN.—The question is :

"That Clause 1-, title, preamble and the enacting formula do stand part of the bill"

*The motion was adopted*

*Clause 1, title preamble and the enacting formula were added to the bill.*

*Motion To Pass*

MR. CHAIRMAN.—Hon'ble Minister may move the motion.

SRI A. LAKSHMISAGAR.—Sir, I beg to move :

"That the Karnataka Tax on Professions, Trades, Callings and Employments (Amendment) Bill, 1983 be passed."

MR CHAIRMAN, —The question is :

"That the Karnataka Tax on Professions, Trades, Callings and Employments (Amendment) Bill, 1983 be passed."

*The Motion was adopted and the Bill was passed*

**The Karnataka Tax on Entry of goods int local Area for consumptieu, use or Sale Therein (Second Amendment Bill 1983.**

*Motion for Consideration*

SRI A LAKSHMISAGAR.—I beg to move :

"That the Karnataka Tax on Entry of Goods into Local Area for Consumption, Use or Sale Therein (Second Amendment) Bill, 1983 be taken into consideration."

*The question was prapased*

ಶ್ರೀ ಎ. ಲಕ್ಷ್ಮೀಸಾಗರ್ : (ಕಾನೂನು ಮಂತ್ರಿಗಳು) —ಮಾನ್ಯ ಅಧ್ಯಕ್ಷರೇ, ಈ ಒಂದು ತಿದ್ದುಪಡಿ ಮಸೂದೆ ಏನು ಇದೆ ಇದು ಬಹಳ ಸರಳವಾದುದು ಹಾಗೂ ಸುಲಭವಾದುದು ಏಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮುಖ್ಯವಾಗಿ ಇದರ ಬಗ್ಗೆ ವಿವರಣೆಯನ್ನು ಎಂಡಬೇಕಾದರೆ ಕ್ಲಾರಿಫಿಕೇಷನ್ ಮತ್ತು ಕ್ಲಾರಿಟಿ ಇನ್ ಕ್ಲಾರೆಕ್ಟರ್ ಏನು ಇದೆ ಇದರಿಂದ ಯಾರಿಗೇ ಆಗಲಿ ಹೊಸ ತೆರಿಗೆಯು ಬೀಳುವುದಿಲ್ಲ. ಇದರಲ್ಲಿ ಹೊಸ ಆದಾಯವೂ ಇಲ್ಲ ಏಂದೂ ಹೇಳುತ್ತೇನೆ. ಈ ತೆರಿಗೆಯನ್ನು ವಸೂಲ್ಮಾಡುವುದಕ್ಕೆ ಸ್ವಲ್ಪ ಸುಲಭವಾಗಿರಲಿ ಅನ್ನುವ ದೃಷ್ಟಿಯಿಂದ ಈ ಒಂದು ತಿದ್ದುಪಡಿ ಮಸೂದೆಯನ್ನು ತಂದಿದ್ದೇನೆ. ಇದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಇದರ ಜೊತೆಗೆ ಇನ್ನೊಂದು ತಿದ್ದುಪಡಿಯನ್ನೂ ಕೂಡ ಮಂಡನೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಅದು ಈ ರೀತಿ ಇದೆ. —

## CLAUSE 2

In item (iii) of Section 16-A after the word "pots", the brackets and words "excluding country made earthen pots" shall be inserted. ಎಂದು ಇದೆ ಇದನ್ನೂ ಸಹ ಸೇರಿಸಿಕೊಳ್ಳಬೇಕು. ಈ ಒಂದು ತಿದ್ದುಪಡಿಗೂ ಸಹ ಈ ಮಾನ್ಯ ಸಭೆ ಮನ್ನಣೆ ಕೊಡಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ.

† ಶ್ರೀ ವಿ. ಎಸ್ ಆಚಾರ್ (ಉಡುಪಿ).—ಮಾನ್ಯ ಅಧ್ಯಕ್ಷರೇ, ದಿ ಕರ್ನಾಟಕ ಟ್ಯಾಕ್ಸ್ ಆನ್ ಎಂಟ್ರಿ ಆಫ್ ಗೂಡ್ಸ್ ಇನ್‌ಟು ಲೋಕಲ್ ಏರಿಯಾಸ್ ಫಾರ್ ಕನ್‌ಸಮ್‌ಷನ್ ಯೂಸ್ ಆರ್ ಸೇಲ್ ದೇರ್ ಇನ್ (ಸೆಕೆಂಡ್ ಅಮೆಂಡ್‌ಮೆಂಟ್) ಬಿಲ್ ೧೯೮೩ ಈ ಒಂದು ತಿದ್ದುಪಡಿಯನ್ನು ನಮ್ಮ ಮುಂದೆ ಇಟ್ಟಿದ್ದಾರೆ, ಇದರ ಬಗ್ಗೆ ಹೇಳಬೇಕಾದರೆ ೧೯೭೯ರಲ್ಲಿ ನಮ್ಮ ರಾಜ್ಯದಲ್ಲಿ ಆಕ್ಟ್ರಾಯಿ ಏನು ಇತ್ತು, ಅದನ್ನು ರದ್ದುತಿ ಮಾಡಿ ಎಂಟ್ರಿ ಟ್ಯಾಕ್ಸ್ ಅನ್ನುವುದನ್ನು ಪ್ರಪ್ರಥಮವಾಗಿ ತಂದರು, ಮೊದಲು ಇದನ್ನು ಮೂರು ವಸ್ತುಗಳ ಮೇಲೆ ತಂದರು. ಹಾಗೆಯೇ ಹೆಚ್ಚಿಸಿಕೊಂಡರು, ಹೆಚ್ಚಿಸಿಕೊಂಡು ಈಗ ೧೬ ವಸ್ತುಗಳ ಮೇಲೆ ಹಾಕಿದ್ದಾರೆ. ಈಗ ನೋಡಿದರೆ ಪ್ಯಾಕಿಂಗ್ ಮೆಟೀರಿಯಲ್ಸ್ ಮೇಲೆ ತೆರಿಗೆ ಕೊಡುವುದನ್ನು ಹೊಸದಾಗಿ ಸೇರಿಸಿದ್ದಾರೆ. ಪ್ರತಿಯೊಂದು ವಸ್ತುವಿನ ಮೇಲೂ ಪ್ಯಾಕಿಂಗ್ ಮೆಟೀರಿಯಲ್ಸ್ ಉಪಯೋಗಿಸುವುದರಿಂದ ಅದರ ಮೇಲೆ ಬಿದ್ದೇ ಬೀಳುತ್ತದೆ. ಇದರಿಂದ ಏನಾಗಿದೆ ಎಂದರೆ ಆವರಿಗೆ ಮಲ್ಟಿ ಪಾಯಿಂಟ್ ಟ್ಯಾಕ್ಸ್ ಬಿದ್ದ ಹಾಗಾಗುತ್ತದೆ. ಈಗ ಇಷ್ಟು ಭಾರ ತೆರಿಗೆ ಆವರು ಹೊರಬೇಕಲ್ಲ ಅನ್ನುವ ಪ್ರಶ್ನೆ ಬಂದಿದೆ. ಇನ್ನು ಎರಡನೆಯದಾಗಿ ಹೇಳಬೇಕಾದರೆ ರಾವ್‌ಮೆಟೀರಿಯಲ್ಸ್ ಏನು ಇದೆ ಅದರ ಬಗ್ಗೆ ಹೆಚ್ಚಿಗೆ ಪರಮಾನ ಈಗಾಗಲೇ ಬರುತ್ತಾ ಇರುವುದರಿಂದ ಈಗ ಮತ್ತಷ್ಟು ಕೂಡ ಬಿದ್ದಂತಾಗುತ್ತದೆ. ಇಂಡಸ್ಟ್ರೀಸ್‌ಗೆ ಹೆಚ್ಚು ರಾವ್‌ಮೆಟೀರಿಯಲ್ಸ್ ಉಪಯೋಗಿಸುತ್ತಾ ಇರುವುದರಿಂದ ಅದರ ಮೇಲೂ ಹೆಚ್ಚಿಗೆ ಟ್ಯಾಕ್ಸ್ ಬಿದ್ದಂತಾಗುತ್ತದೆ. ಸಣ್ಣ ಸಣ್ಣ ಕೈಗಾರಿಕೆಗಳಿಗೆಲ್ಲಾ ರಾ-ಮೆಟೀರಿಯಲ್ಸ್ ಬೇಕಾಗಿರುವುದರಿಂದ ಆವರು ತೆಗೆದುಕೊಂಡಂಥಾ ವಸ್ತುವಿಗೆ ಸೇಲ್ಸ್ ಟ್ಯಾಕ್ಸ್ ಸರ್ ಛಾರ್ಜ್, ಟರ್ನ್ ಓವರ್ ಟ್ಯಾಕ್ಸ್ ಎಂಟ್ರಿಟ್ಯಾಕ್ಸ್ ಇಷ್ಟೇ ಬೀಳುತ್ತದೆ. ಜೊತೆಗೆ ಫಿನಿಷಿಂಗ್ ಗೂಡ್ಸ್ ಮೇಲೂ ಈ ಒಂದು ಟ್ಯಾಕ್ಸ್ ಹಾಕುವುದರಿಂದ ಇದು ಸಣ್ಣ ಸಣ್ಣ ಯೂನಿಟ್‌ಗಳಿಗೂ ಸಹ ಅನ್ಯಾಯವಾಗುತ್ತದೆ. ಇದರಲ್ಲಿ ಸೇಲ್ಸ್ ಟ್ಯಾಕ್ಸ್ ಸೇರಿಸಿಕೊಂಡರು ಸಹ ಆದರಿಂದ ಏನೂ ಇದಕ್ಕೆ ಡೂಪ್ಲಿಕೇಷನ್ ಆಥವಾ ರೀಡೂಪ್ಲಿಕೇಷನ್ ಆಗಲಿ ಏನೂ ಆಗುವುದಿಲ್ಲ, ಹೀಗೆ ಬರಬರುತ್ತಾ ಈ ಎಂಟ್ರಿ ಟ್ಯಾಕ್ಸ್ ಅನ್ನುವುದು ಎಲ್ಲ ವಸ್ತುಗಳಿಗೂ ಸೇರಿಬಿಡುತ್ತದೆ. ಹೀಗೆ ಸೇರಿಸುತ್ತಾ ಹೋದರೆ ಯಾವ ಕನ್‌ಸ್ಯೂಮರ್‌ಗಾಗಲೀ ಏನೂ ಉಪಯೋಗವಾಗುವುದಿಲ್ಲ. ತೊಂದರೆ ಯಾಗುತ್ತದೆ. ಈ ದೃಷ್ಟಿಯಿಂದ ನಾನು ಇದನ್ನು ವಿರೋಧಿಸುತ್ತೇನೆ. ಈ ಸಂದರ್ಭದಲ್ಲಿ ತಮಗೆ ಇನ್ನೊಂದು ವಿಷಯ ಹೇಳುತ್ತೇನೆ. ಆದೇನೆಂದರೆ ಮೊದಲು ಇವೆಲ್ಲಾ ಮುನಿಸಿಪಾಲಿಟಿಯ ಒಂದು ಲಿಸ್ಟ್‌ನಲ್ಲಿ ಇತ್ತು. ಈಗ ಆದನ್ನು ರಾಜ್ಯದ ಲಿಸ್ಟ್‌ಗೆ ತೆಗೆದುಕೊಂಡಿದ್ದೀರಿ. ಇದರಿಂದ ಈಗ ಏನಾಗಿದೆ ಎಂದರೆ ಮುನಿಸಿಪಾಲಿಟಿಗಳಿಗೆ ನ್ಯಾಯವಾಗಿ ಸಿಗಬೇಕಾದಂಥ ತೆರಿಗೆ ಆಥವಾ ಪಾಲು ಆಗಲಿ ಈಗ ಸಿಕ್ಕುತ್ತಾ ಇಲ್ಲ. ನಿಮಗೆ ಒಂದು ಉದಾಹರಣೆಯನ್ನು ಕೊಡಬೇಕಾದರೆ ಅರ್ಬನ್ ಡೆವಲಪ್‌ಮೆಂಟ್‌ನ ರಿಪೋರ್ಟ್ ನೋಡಿದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರು ಒಂದು ಬಿಟ್ಟು ಬೇರೆ ಇನ್ನಾವ ಮುನಿಸಿಪಾಲಿಟಿಗಳಲ್ಲೂ ಸಹ ಒಂದು ನಯಾ ಪೈಸೇ ಎಂಟ್ರಿ ಟ್ಯಾಕ್ಸ್ ಸಹ ಸಿಕ್ಕಿಲ್ಲ. ೧೯೭೯ರಲ್ಲಿ ನಮ್ಮ ನಗರಸಭೆ ಎಂಟ್ರಿಟ್ಯಾಕ್ಸ್ ಕೊಟ್ಟಿದ್ದರೂ ಸಹ ನಮಗೆ ಕೊಡಬೇಕಾದ ಪಾಲು ನೋಡಿದರೆ ಆದರಲ್ಲಿ ೧೦ ಪೈಸೆ ಸಹಾ ಕೊಟ್ಟಿಲ್ಲ. ಹೀಗಾದರೆ ನೀವು ಯಾವ ಒಂದು ನೈತಿಕ ಆಧಾರದ ಮೇಲೆ ತೆಗೆದುಕೊಳ್ಳುತ್ತೀರಿ ಎಂದು ಕೇಳಬೇಕಾಗಿದೆ. ಮೂಲತಃ ಈ ಒಂದು ಆದಾಯ ನಗರ ಸಭೆಗಳಿಗೆ ದೊರಕ ಬೇಕಾದುದನ್ನು ಸರ್ಕಾರವೇ ಕಿತ್ತುಕೊಂಡಿರುವುದಲ್ಲದೆ, ನಗರಸಭೆಗಳಿಗೆ ಇದರ ಬಗ್ಗೆ ಏನು ಎಂದು ಮರುಹಂಚಿಕೆ ಮಾಡಬೇಕೋ ಆದನ್ನೂ ಕೂಡ ಸರಿಯಾಗಿ ಮಾಡದೇ ಇರುವುದರಿಂದ ಇದನ್ನು ಕೇಳಲು ಆವರಿಗೆ ನೈತಿಕ ಹಕ್ಕು ಇಲ್ಲ ಎಂದು ಹೇಳುತ್ತೇನೆ. ಹೋಗಲಿ ಈ ಒಂದು ಲಿಸ್ಟ್‌ನಂತೆ ಆವರವರೇ ಮಾಡಿಕೊಳ್ಳುವುದಕ್ಕೂ ಕೂಡ ಆದೂ ಸಹ ಸಮರ್ಪಕವಾದ ರೀತಿಯಲ್ಲಿ ಇಲ್ಲ. ಇದು ಮಲ್ಟಿಪ್ಲಿಸಿಟಿ ಟ್ಯಾಕ್ಸ್ ಆಗುವುದರಿಂದ ನಾನು ಇದನ್ನು ವಿರೋಧ ಮಾಡುತ್ತೇನೆ. ಇದರ ಬಗ್ಗೆ ನನ್ನ ಒಂದು ಸಲಹೆ ಏನೆಂದರೆ ಇದಕ್ಕೆ ಹೊಸರೂಪಕೊಟ್ಟು ಯಾವ್ಯಾವ ತೆರಿಗೆಹಾಕಬೇಕೊ ಅವೆಲ್ಲವನ್ನೂ

ಕನ್‌ಸಾಲಿಡೇಟ್ ಮಾಡಿ ಸೇಲ್ಸ್ ಟ್ಯಾಕ್ಸ್ ಆಗಲಿ ಎಂಟ್ರಿ ಟ್ಯಾಕ್ಸ್ ಆಗಲಿ ಅದಕ್ಕೆ ಎಲ್ಲವನ್ನೂ ಸೇರಿಸಿಬಿಟ್ಟು ಒಂದೇ ಟ್ಯಾಕ್ಸ್ ಇರುವ ಹಾಗೆ ಮಾಡಿದರೆ ಒಳ್ಳೆಯದು ಎಂದು ಹೇಳುತ್ತೇನೆ. ಹಾಗಿಲ್ಲದೆ ಇದನ್ನೇ ಮುಂದುವರೆಸಿಕೊಂಡು ಹೋಗುವುದಾದರೆ ಅದಕ್ಕೆ ನನ್ನ ವಿರೋಧ ಇದೆ ಎಂದು ಹೇಳುತ್ತೇನೆ. ತಮಗೆ ಈ ಸಂದರ್ಭದಲ್ಲಿ ಹೇಳಬೇಕಾದರೆ ಎಲ್ಲಲ್ಲ ರೀತಿಯ ಟ್ಯಾಕ್ಸ್ ಹೆಚ್ಚು ಬರಬೇಕಾಗಲಿ-ಅಥವಾ ಎಂಟ್ರಿಟ್ಯಾಕ್ಸ್‌ನಿಂದ ಹೆಚ್ಚು ಬರುವುದಾಗಲಿ ಬರತಕ್ಕಂಥ ಜಿಲ್ಲೆ ಯಾವುದು ಎಂದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇನ್‌ಕಂ ಟ್ಯಾಕ್ಸ್ ಕಮೀಷನರ್ ನಮ್ಮ ಜಿಲ್ಲೆಗೆ ಬಂದಿದ್ದಾಗ ೨೦ ಜಿಲ್ಲೆಗಳಲ್ಲಿ ನಿಮ್ಮ ಜಿಲ್ಲೆ ಮೂರು ಜಿಲ್ಲೆಯವರು ಮಾತ್ರ ಹೆಚ್ಚು ಟ್ಯಾಕ್ಸ್ ಕೊಡತಕ್ಕಂಥಾದ್ದು ಅನ್ನುವ ಮಾತನ್ನು ಹೇಳಿದ್ದಾರೆ. ಇಷ್ಟಾದರೂ ಕೂಡ ನಮ್ಮ ಜಿಲ್ಲೆಗೆ ನ್ಯಾಯವಾಗಿ ಇದರ ಬಗ್ಗೆ ಏಕಾದಂಥ ಪರಿಹಾರ ಏನು ಇದೆ ಅದನ್ನು ಸರ್ಕಾರ ಕೊಡದೇ ಇರತಕ್ಕಂಥಾದ್ದು ಸರಿಯೇ ? ನಾನು ಈ ಮಾತನ್ನು ಇದೇ ಪದೇ ಪದೇ ಹೇಳುತ್ತಿದ್ದೇನೆ. ಈಗಲಾದರೂ ಕೂಡ ಮಾನ್ಯ ಸಚಿವರು ಇದಕ್ಕೆ ಉತ್ತರ ಕೊಡಬೇಕೆಂದು ಹೇಳುತ್ತೇನೆ. ನಾವು ಈ ತಿದ್ದುಪಡಿಯನ್ನು ವಿರೋಧ ಮಾಡಿದರೂ ಕೂಡ ನಮ್ಮ ಶ್ರುತಿ ಅದರಲ್ಲಿ ದಾಖಲೆ ಆಗುವುದಿಲ್ಲ. ಮಾನ್ಯ ಸಚಿವರು ಉತ್ತರ ಕೊಡುವಾಗಲಾದರೂ ಹೇಳಬೇಕು. ಹೆಚ್ಚು ಬೆಳೆಸಿಕೊಂಡು ಹೋಗುವುದು ಸರಿಯಲ್ಲ. ಅದಷ್ಟು ಜಾಗ್ರತೆಯಾಗಿ ಇದನ್ನು ಬಗೆಹರಿಸಬೇಕು ಎಂದು ಹೇಳುತ್ತೇನೆ.

4 P. M.

SRI A. LAKSHMI SAGAR.—He is proceeding on a wrong footing and these are not new entries. They are already there.

SRI V. S. ACHARYA.—No, Sir.

SRI A. LAKSHMISAGAR.—I am speaking on behalf of the Government. I know what I am speaking. Kindly bear with me. These are all not new items. All that is sought to be done is clarification of certain goods so that the assessees may not be troubled.

ಡಾ. ವಿ. ಎಸ್. ಆಚಾರ್ಯ.—ಯಾವ ಪುಟದಲ್ಲಿ ಪ್ಯಾಕಿಂಗ್ ರಾಮೋಟಿರಿಯಲ್ಸ್ ಹೊರತಾಗಿ ಉಲ್ಲೇಖ ಮಾಡಿದ್ದೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ವಿಷಯಗಳನ್ನು ಸರಿಯಾಗಿ ತಿಳಿದುಕೊಂಡು ಹೇಳಿದರೆ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ.

In 16—A, we have said :

> "Packing materials, namely, (1) wrapping paper, fibre board cases....."

In order to see that there may not be any ambiguity in the matter of assessment of goods coming under packing materials, an attempt is made there. That is why all clarifications are given. The items are also listed i. e., (i) to (v) so that there may not be any difficulty in the matter of assessment of entry tax on the goods mentioned here. This is point number one. Point number two is this. Similarly, an attempt is made to mention what are the raw materials ? They are listed here. They are already under tax.

ಶ್ರೀ ವಿ. ಎಸ್. ಆಚಾರ್.—ಈ ಅಸಮರ್ಷನ್ ತಪ್ಪು ಎಂದು ನಾನು ಹೇಳುವುದು. ಪ್ಯಾಕಿಂಗ್ ಮೆಟೀರಿಯಲ್ಸ್ ಇಲ್ಲದೆ ಯಾವ ವಸ್ತು ಸಿಕ್ಕುತ್ತದೆ? Verifications should have been made to exempt these things. The Government is going on a wrong footing. Without wooden box, con you purchase certain commodities ? you cannot carry them without these things. You should have exempted these items. Is it progressive taxation ? What is the rationale behind this ? ಅಕ್ಕಿಯನ್ನು ತುಂಬಲಿಕ್ಕೆ ಗನ್ನಿ ಬ್ಯಾಗ್ ಬೇಕಾಗುತ್ತದೆ. ಇಲ್ಲಿ ಅಕ್ಕಿಗೂ ಟ್ಯಾಕ್ಸ್ ಕೊಡುವುದಲ್ಲದೆ ಬ್ಯಾಗ್‌ಗೂ ಸಹ ಟ್ಯಾಕ್ಸ್‌ನ್ನು ಕೊಡಬೇಕಾಗುತ್ತದೆ. ವರ್ಷ ವರ್ಷ ಇವರು ಈ ರೀತಿಯಾಗಿ ಟ್ಯಾಕ್ಸ್‌ಗಳನ್ನು ವಿಸ್ತರಣೆ ಮಾಡಿಕೊಂಡು ಹೋಗುತ್ತಾರೆ, ಕ್ಲಾರಿಫಿಕೇಷನ್ ಎಂದು ಹೇಳುವಂಥ ಜಾಲದಲ್ಲಿ ಇನ್ನಷ್ಟು ಟ್ಯಾಕ್ಸ್‌ಗಳನ್ನು ವಿಸ್ತರಣೆ ಮಾಡಿಕೊಂಡು ಹೋಗುತ್ತಿದ್ದಾರೆ. ಈ ದೃಷ್ಟಿಯಿಂದ ನಾವು ಇದನ್ನು ವಿರೋಧ ಮಾಡಬೇಕಾಗಿದೆ, ಇದರಿಂದ ನ್ಯಾಯವಾಗಿ ಸಿಕ್ಕಬೇಕಾದ ಪರಿಹಾರವೂ ಕೂಡ ನಗರಸಭೆಗಳಿಗೆ ಸಿಕ್ಕುತ್ತಿಲ್ಲ. ನಗರಸಭೆಗಳಿಗೆ ಕೊಡಬೇಕಾದಂಥ ಪರಿಹಾರದ ಬಗ್ಗೆ ಇವರು ಕ್ಲಾರಿಫಿಕೇಷನ್ ಏನೂ ಕೊಡುತ್ತಿಲ್ಲ. ಇಷ್ಟು ಕ್ಲಾರಿಫಿಕೇಷನ್ ಕೊಡಲಿಕ್ಕೆ ಸರ್ಕಾರದವರು ಸೆಕ್ಷನ್ ೧೬(ಎ)ಯನ್ನು ಇನ್‌ಕ್ಲೂಡ್ ಮಾಡಿದ್ದಾರೆ. ನಗರಸಭಾ ಮಂತ್ರಿಗಳು ಕಳೆದ ಮೂರು ವರ್ಷಗಳಿಂದ ನಗರಸಭೆಗಳಿಗೆ ಒಂದು ನಯಾಪೈಸೆಯನ್ನು ಪರಿಹಾರ ಕೊಡದೆ ಇದರ ಬಗ್ಗೆ ಯೋಚನೆ ಕೂಡ ಮಾಡುತ್ತಿಲ್ಲ. ಇಷ್ಟು ಹೇಳಿ ನಾನು ಇದನ್ನು ವಿರೋಧ ಮಾಡುತ್ತೇನೆ.

† ಶ್ರೀ ವಿ. ಧನಂಜಯಕುಮಾರ್.—ಮಾನ್ಯ ಮಂತ್ರಿಗಳು ಇಲ್ಲಿ ಕ್ಲಾರಿಫಿಕೇಷನ್ ಮಾಡುವಂಥ ಈ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ನಾವು ಇದನ್ನು ಸೂಕ್ಷ್ಮವಾಗಿ ಗಮನಿಸಿದರೆ, ಒಂದು ಹೊಸ ಶಬ್ದವನ್ನು ಇವರು ಕಂಡುಹಿಡಿದಿದ್ದಾರೆ. ಪ್ರತಿಯೊಂದು ವಾಕ್ಯದ ಕೊನೆಯಲ್ಲಿಯೂ ಇವರು 'ಅಂಡ್ ದಿ ಲೈಕ್' ಎನ್ನುವ ಶಬ್ದವನ್ನು ಸೇರಿಸಿಕೊಂಡು ಹೋಗಿದ್ದಾರೆ. ಈ ಒಂದು ಶಬ್ದವನ್ನು ಇವರು ಉಪಯೋಗ ಮಾಡಿ ಕೊಂಡು ಹೆಚ್ಚು ಆದಾಯ ಪಡೆಯುತಕ್ಕ ವಾದ ಇದೆ. ಇದರಿಂದ ಸರ್ಕಾರದವರು ಜನರ ಮೇಲೆ ತೆರಿಗೆ ಹಾಕಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. 'ಅಂಡ್ ದಿ ಲೈಕ್' ಶಬ್ದದ ಬಗ್ಗೆಯಾದ ತಾವು ವಿವರಣೆಯನ್ನು ಕೊಡಬೇಕಾಗುತ್ತದೆ. ಇದನ್ನು ಉಪಯೋಗ ಮಾಡಿಕೊಂಡು ಪ್ರತಿಯೊಂದು ಸಾಮಾನಿನ ಮೇಲೂ ಎಂಟ್ರಿ ಟ್ಯಾಕ್ಸ್ ಹಾಕುವಂಥ ಪ್ರಮೇಯ ಬರಬಹುದು. ಇದನ್ನೂ ಸಹ ಸರ್ಕಾರದವರು ಕ್ಲಾರಿಫೈ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಡಾಕ್ಟರ್ ಆಚಾರ್ ಅವರು ಹೇಳಿದ ಹಾಗೆ ಇಲ್ಲಿ ಯಾವುದೇ ವಸ್ತುಗಳ ಮೇಲೂ ಎಂಟ್ರಿ ಟ್ಯಾಕ್ಸ್ ಇರುತ್ತದೆ. ಇಲ್ಲಿ ಒಂದು ವಸ್ತುವಿಗೆ ಎರಡು ರೀತಿಯಲ್ಲಿ ಟ್ಯಾಕ್ಸನ್ನು ಕೊಡಬೇಕಾಗುತ್ತದೆ.

ವೈಸ್ ಛೇರ್ಮನ್,—'ಅಂಡ್ ದಿ ಲೈಕ್ಸ್' ಬಗ್ಗೆ ತಮಗೆ ಡೆಫಿನಿಷನ್ ಬೇಕಾದ ಹಾಗೆ ಕಾಣುತ್ತದೆ.

ಶ್ರೀ ವಿ. ಧನಂಜಯಕುಮಾರ್.—ಕ್ಲಾರಿಫೈ ಮಾಡಲಿಕ್ಕಾಗಿ ತಂದ ಅಮೆಂಡ್‌ಮೆಂಟಿನಲ್ಲಿ ತುಂಬಾ ಅಸಂಬದ್ಧತೆ ಇದೆ. ಈ ವ್ಯವಸ್ಥೆಯೂ ಸಹ ಹೆಚ್ಚಿನ ತೆರಿಗೆಯನ್ನು ಹಾಕುವುದಕ್ಕೆ ಕಾರಣವಾಗುತ್ತದೆ ಎನ್ನುವ ಪ್ರಾತನ್ನು ನಾನು ಹೇಳಬೇಕಾಗಿದೆ. ಪ್ರತಿಯೊಂದು ರಾ ಮೆಟೀರಿಯಲ್ಸ್ ಮೇಲೂ ಎಂಟ್ರಿ ಟ್ಯಾಕ್ಸ್ ಇರುತ್ತದೆ. ಇದರ ಜೊತೆಗೆ ಪ್ಯಾಕಿಂಗ್ ಫೇಪರ್ ಮತ್ತು ರ‍್ಯಾಪಿಂಗ್ ಪೇಪರ್ ಮೇಲೂ ಟ್ಯಾಕ್ಸ್ ಹಾಕುತ್ತಿದ್ದಾರೆ. ಉದಾಹರಣೆಗೆ ಬಟರ್ ನಂಬರ್ ೫ರಲ್ಲಿ ಸಿಮೆಂಟ್.— ಇದರ ಮೇಲೆ ಎಂಟ್ರಿ ಟ್ಯಾಕ್ಸ್ ಇದೆ ಇದನ್ನು ಪ್ಯಾಕ್ ಮಾಡತಕ್ಕ ಚೀಲಕ್ಕೂ ಇದರ ಪ್ರಕಾರ ಟ್ಯಾಕ್ಸ್ ಬೀಳುತ್ತದೆ. ಇದನ್ನು ಸರ್ಕಾರದವರು ಗಮನಿಸಬೇಕಾಗಿದೆ. ಇದರಿಂದ ಸುಲಭದ ರೀತಿಯಲ್ಲಿ ಮೋಸ ಗೊಳಿಸತಕ್ಕ ಕೆಲಸಕ್ಕೆ ಹೋದಂತಾಗುತ್ತದೆಂದು ನಾನು ಹೇಳುತ್ತೇನೆ. ಯಾವುದಾದರೂ ಒಂದು ಮೂಲದಲ್ಲಿ ಈ ತೆರಿಗೆಯನ್ನು ಹಾಕಿ ಈ ಎಂಟ್ರಿ ಟ್ಯಾಕ್ಸನ್ನು ಎಕ್ಸಂಪ್ಟ್ ಮಾಡಬೇಕು. ಇಲ್ಲಿ ಸರ್ಕಾರದವರು ಪ್ರೊಗ್ರೆಸ್ಸೀವ್ ಟ್ಯಾಕ್ಸೇಷನ್ ರೀತಿಯ ಯೋಚನೆ ಮಾಡಬೇಕು. ಬುದ್ಧಿವಂತಿಕೆಯಿಂದ ಜನರನ್ನು ಮೋಸ ಗೊಳಿಸತಕ್ಕ ರೀತಿಯಲ್ಲಿ ತೆರಿಗೆಯನ್ನು ಹಾಕಬಾರದು ಎಂದು ನಾನು ಹೇಳಿ ಇದಕ್ಕೆ ನನ್ನ ವಿರೋಧವನ್ನು ವ್ಯಕ್ತ ಮಾಡುತ್ತೇನೆ.

ಶ್ರೀ ಎಚ್. ಗಂಗಾಧರನ್.—ಮಾನ್ಯ ಸಭಾಧ್ಯಕ್ಷರೇ, ಹಳೆಯ ಆರ್ಡರ್ ೧೬ (೩)ರಲ್ಲಿ All raw materials, components, parts and inputs which are used in the manufacture of an intermediate or finished products. In the explanation, you have said raw materials, Component parts and inputs 'do not include agricultural produce ಎಂದು ಹೇಳಿದ್ದಾರೆ. ಇದರ ಬಗ್ಗೆ ಒಂದು ನೋಟಿಫಿಕೇಷನ್ ಕೂಡ ಇದೆ ನೋಟಿಫಿಕೇಷನ್ ಎಫ್.ತಿ ೧೧೮, ಸಿ ಇ ರಕ್ಷಿ ಡೇಟೆಡ್ ೩೧-೩-೧೯೮೩ ಇದರಲ್ಲಿಯು ಸಹ ೧೬ ಐಟಂಗಳು ಇವೆ.

ಶ್ರೀ ಎ. ಲಕ್ಷ್ಮೀಸಾಗರ್.—ರೀ ನಂಬರ್ ಮಾಡಿದ್ದಾರೆ.

ಶ್ರೀ ಎಚ್. ಗಂಗಾಧರನ್.—ಅಗ್ರಿಕಲ್ಚರಲ್ ಪ್ರಾಡ್ಯೂಸ್ ಎಂದು ಹೇಳುತ್ತಾರೆ. ಕಾಟನ್ ಸೀಡ್ ಆಯಿಲ್, ರಿಫೈನ್ ಆಗುವುದಕ್ಕೆ ಎರಡು ಸ್ಟೇಜ್‌ನಲ್ಲಿ ಅದು ಪ್ರೊಸೆಸ್ ಆಗಬೇಕು. ರಾ, ಆಯಿಲ್ ಆದಸಂತರ ಬೇರೆ ಕಡೆಯಲ್ಲಿ ಅದನ್ನು ರಿಫೈನ್ ಮಾಡುತ್ತಾರೆ. ಉದಾಹರಣೆಗೆ, ಹುಬ್ಬಳ್ಳಿಯಲ್ಲಿ ರಾ ಆಯಿಲ್ ಆಗಿ ಅದನ್ನು ಮೈಸೂರಿನಲ್ಲಿ ರೀಫೈನ್ ಮಾಡುವುದಕ್ಕೆ ತೆಗೆದುಕೊಂಡು ಹೋದರೆ ಅಲ್ಲಿಯೂ ಸಹ ಎಂಟ್ರಿ ಟ್ಯಾಕ್ಸ್ ಕೊಡುವುಥಾದ್ದು ಆಗುತ್ತದೆ. ಅದಕ್ಕೋಸ್ಕರವಾಗಿ ಎಂಟ್ರಿಟ್ಯಾಕ್ಸ್‌ನ್ನು ಸರಿಯಾದ ರೀತಿಯಲ್ಲಿ ಇಂಟರಪ್ರಿಟ್ ಮಾಡುವುದು ಒಳ್ಳೆಯದು

You have said all raw materials, component parts and inputs which are used in the manufacture of an intermediate or finished product. For example, processing or any other chemical solvents used in the solvent extraction process, catalyst and the like which may be used in the manufacture of an intermediate or finished product. These industrial units are not usually registered. In Hubli and other places, they manufacture raw oil but for refinement, it should come to refined mills at Mysore. They have to pay entry tax at two places. ಇಂಡಸ್ಟ್ರಿಯಲ್ ಯುನಿಟ್ ಎಂದು ಯಾರು ಸಹ ರಿಜಿಸ್ಟರ್ ಮಾಡಿಸಿರುವುದಿಲ್ಲ ಇವರಿಗೂ ಸಹ ಎಂಟ್ರಿ ಟ್ಯಾಕ್ಸ್ ಪಾಲ್ಲಿಸಿ ಅನ್ವಯವಾಗುತ್ತದೆ. ಇದರಿಂದಾಗಿ ರಿಫೈಂಡ್ ಆಯಿಲ್‌ಗೆ ಜನರು ಸಮಾರು ಎರಡೂ ವರೆ ರೂಪಾಯಿಗಳನ್ನು ಜಾಸ್ತಿ ಕೊಡಬೇಕಾಗುತ್ತದೆ. ಆದ್ದರಿಂದ ಸರ್ಕಾರದವರು ಈ ರೀಫೈನರಿ ಯುನಿಟ್ಸ್‌ಗೆ ಎಕ್ಸೆಂಪಷನ್ ಕೊಡುವುದನ್ನು ಯೋಚನೆ ಮಾಡಬೇಕಾಗುತ್ತದೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರಿಂದ ಜನರಿಗೆ ಹೆರ್ಯಾಸ್‌ಮೆಂಟ್ ಇಲ್ಲದೆ ಇರುವುದಕ್ಕೆ ಅವಕಾಶವಾಗುತ್ತದೆ, ಇಲ್ಲದೆ ಹೋದರೆ ಇಲ್ಲಿ ಕರಪ್ಷನ್‌ಗೆ ಅವಕಾಶವಾಗುತ್ತದೆ. ಆದ್ದರಿಂದ ತಾವು ಇದನ್ನು ಸೂಕ್ತವಾಗಿ ತಿದ್ದುಪಡಿ ಮಾಡಲೇಬೇಕಾಗುತ್ತದೆ ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಮುಖ್ಯವಾಗಿ ಮಾನ್ಯ ಡಾಕ್ಟರ್ ಆಚಾರ್ಯರು ಎರಡು ವಿಚಾರಗಳನ್ನು ಹೇಳಿದ್ದಾರೆ. ಈಗಾಗಲೇ ಇಲ್ಲಿ ನಮೂದಾಗಿರತಕ್ಕಂಥ ವಿಷಯಗಳ ಬಗ್ಗೆ ಈ ಒಂದು ತೆರಿಗೆ ಉಂಟು. ಈಗಿರತಕ್ಕಂಥ ಪೆಸರುಗಳನ್ನು ಇದರಲ್ಲಿ ಕೊಟ್ಟಿದೆ. ಆ ನೋಟಿಫಿಕೇಷನ್ ಮಾನ್ಯ ಗಂಗಾಧರ್‌ರವರು ಓದಿದರಲ್ಲ ಅದು ಸಮರ್ಪಕವಾಗಿಲ್ಲ, ಏಕೆಂದರೆ, ಕೆಲವು ಕಡೆ ಆಯ್ಲ್ ಬಸ್ ಆಗಿದ್ದು ತೆರಿಗೆ ಹಾಕತಕ್ಕ ಸಂದರ್ಭದಲ್ಲಿ ಕೆಲವರಿಗೆ ತೊಂದರೆಯಾಗುತ್ತದೆ. ಎನ್ನತಕ್ಕ ದೂರುಗಳು ಬಂದ ಕಾರಣ ಅವುಗಳ ಬಗ್ಗೆ ಎಲ್ಲಾ ಇಲ್ಲಿ ನಾವು ವಿವರಣೆ ಕೊಟ್ಟಿದ್ದೇವೆ. ನಾನು ಒಂದನ್ನು ಓದುತ್ತೇನೆ, packing materials namely Wrapping paper, fibre board cases, paper boxes, folding cartoons, paper bags, carrier bags, card board boxes, corrugated board boxes and the like. ಹೀಗೆ ಅದನ್ನು ವಿಮರ್ಶೆಮಾಡಿ ಆ ಗುಂಪಿನ ವಸ್ತುಗಳನ್ನು ಅಲ್ಲಿ ನಮೂದು ಮಾಡಿದ್ದೇವೆ. ಇದರ ಬಗ್ಗೆ ವ್ಯತ್ಯಾಸ ಆಥವಾ ಕನ್‌ಫ್ಯೂಷನ್ ಆಗುವುದಕ್ಕೆ ಸಾಧ್ಯವೇ ಇಲ್ಲ, ಇದರಲ್ಲಿ ಮುಖ್ಯವಾಗಿ ಅಡಕವಾಗಿರತಕ್ಕಂಥ ಹೊಸ ತೆರಿಗೆ ಹಾಕ ತಕ್ಕ ವಸ್ತುಗಳು ಇದರಲ್ಲಿ ಇಲ್ಲ. ಈಗ ಹಾಲಿ ಇರತಕ್ಕ ವಸ್ತುಗಳನ್ನೆ

ವಿವರಣಾತ್ಮಕವಾದ ರೀತಿಯಲ್ಲಿ ಇಲ್ಲಿ ಕ್ಲಾರಿಫಿಕೇಷನ್ ನೀವು ಕೇಳ ಬಹುದು ಎನ್ನುವ ರೀತಿಯಲ್ಲಿ ಹಾಕಿದ್ದೇನೆ. ಮಾನ್ಯ ಆಚಾರ್ಯರು ಇದನ್ನು ವಿಸ್ತಾರ ಮಾಡುತ್ತಾ ಹೋಗುತ್ತಾ ಇದ್ದೀರಿ ಎಂದು ಹೇಳಿದರು ಇದನ್ನು ವಿಸ್ತಾರ ಮಾಡುವ ಪ್ರಯತ್ನ ಇಲ್ಲ. ಮಾಡತಕ್ಕಂಥ ಉದ್ದೇಶವು ಇಲ್ಲ, ವಿಸ್ತರಣೆ ಇಲ್ಲವೆ. ಇಲ್ಲ, ಇರತಕ್ಕಂಥಾದ್ದು ನಿಗದಿಮಾಡಿ ಮಾಡತಕ್ಕಂಥಾದ್ದು. to clarify. to give explanation and to bring within the legal compass of the goods that should naturally come within the tax net of the entry tax. this is all that is sought to be made. There is no fresh taxation at all. Let me make it very clear. other point is ಮುನಿಸಿಪಾಲಿಟಿಗೆ ಕೊಡುತ್ತಾ ಇಲ್ಲಾ ನೀವು ತೆಗೆದುಕೊಳ್ಳುತ್ತಾ ಇದ್ದೀರಿ ಎಂದು ಹೇಳಿದರು ಸ್ವಾಮಿ. ಹೋದವರ್ಷ ಒಟ್ಟು ಎಂಟ್ರಿ ಟಾಕ್ಸ್ ಬಂದಿರತಕ್ಕಂಥಾದ್ದು ೧೧ ಕೋಟಿ ರೂಪಾಯಿ. ಮುನಿಸಿಪಾಲಿಟಿಗಳಿಗೆ ಸಹಾಯಧನ ಕೊಟ್ಟಿರುವುದು ಸರ್ಕಾರ ೨೫–೩೦ ಕೋಟಿ ರೂಪಾಯಿ ಏನೂ ಕೊಡಲೇ ಇಲ್ಲ ನೀವೇ ತೆಗೆದುಕೊಳ್ಳುತ್ತಾ ಇದ್ದೀರಿ ಅಂದರೆ ಹೇಗೆ ?

ಶ್ರೀ ಪಿ. ಎಸ್. ಆಚಾರ್ಯ.—ದಕ್ಷಿಣ ಕನ್ನಡ ಜಿಲ್ಲೆಯ ಒಂದು ನಗರಸಭೆಯನ್ನು ಬಿಟ್ಟರೆ ಬೇರೆ ಕಡೆ ಒಂದು ನಯೇ ಪೈಸೆ ಸಹ ಕೊಟ್ಟಿಲ್ಲ.

ಶ್ರೀ ಎಂ. ಲಕ್ಷ್ಮೀಸಾಗರ್.—ರಾಜ್ಯದ ಒಟ್ಟು ತೆರಿಗೆ ವಿಚಾರ ಪ್ರಸ್ತಾಪ ಮಾಡತಕ್ಕಂಥ ಸಂದರ್ಭದಲ್ಲಿ ತೆರಿಗೆ ವ್ಯಾಪ್ತಿ ಏನು ಆದಾಯವೇನು, ಖರ್ಚು ಏನು ಎಂಬುದರ ಬಗ್ಗೆ ಇರಬೇಕು. ಸ್ಥಳೀಯ ಸಂಸ್ಥೆಗಳಿಗೆ ಹಣ ಸಹಾಯ ಕೊಡತಕ್ಕವನು ನಾನಲ್ಲ. ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಆದರೂ ಕೂಡ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬರತಕ್ಕಂಥ ಸ್ಥಳೀಯ ಸಂಸ್ಥೆಗಳಿಗೆ ಸರಿಯಾದ ಪ್ರಮಾಣದಲ್ಲಿ ಪರಿಹಾರ ಸಿಕ್ಕಿಲ್ಲ. ಎನ್ನುವುದು ಇರಬಹುದು. ಅದು ಬೇರೆ ಪ್ರಶ್ನೆ. ಕೇಳಿದರೆ ಕೊಡಬಹುದು ೨೫–೩೦ ಕೋಟಿ ಹಣದ ಪ್ರಮಾಣ ಇರುವಂಥ ವಿಚಾರದಲ್ಲಿ ಒಂದೆರಡು ಸ್ಥಳೀಯ ಸಂಸ್ಥೆಗಳಿಗೆ ಸಿಕ್ಕದೇ ಇರತಕ್ಕಂಥಾದ್ದು. ಅದು ಬೇರೆ ವಿಚಾರ. ಒಟ್ಟು ತೆರಿಗೆ ವ್ಯಾಪ್ತಿ ಏನು ಆದಾಯ ಏನು ಅದರಿಂದ ಆಗತಕ್ಕ ವೆಚ್ಚ ಏನು ಅನುಕೂಲಗಳು ಏನು ಎನ್ನುವ ವಿವರಣೆ ಹೇಳಿದೆ. ಇನ್ನೊಂದು ಪ್ರಶ್ನೆ ಏನೆಂದರೆ ಮಾನ್ಯ ಆಚಾರ್ಯರು ಪ್ರೊಗ್ರೆಸಿವ್ ಟ್ಯಾಕ್ಸೇಷನ್ ಎಂದು ಹೇಳಿದ್ದಾರೆ, ನಾನು ಅವರಿಗೆ ಅಲ್ಲಿ ಹೇಳಿದೆ. ನಾನು ಎಂ. ಎ. ನಲ್ಲಿ ಎಕನಾಮಿಕ್ಸ್ ಮಾಡಿದ್ದೇನೆ. ಆಚಾರ್ಯರು ಎಂ. ಬಿ. ಬಿ. ಎಸ್. ಡಾಕ್ಟರು ಅವರು ತೆರಿಗೆ ವಿಚಾರ ತಿಳಿದುಕೊಂಡಿದ್ದಾರೆ, ನಾನು ಇಲ್ಲ ಎಂದು ಹೇಳುವುದಿಲ್ಲ. ಆದುದರಿಂದ ನಾನು ಹೇಳಬೇಕಾಗಿಲ್ಲ. ನನಗೂ ಇದೇ ವಿಷಯದಲ್ಲಿ ತೊಂದರೆ ಇತ್ತು. ನಾನು ನಿನ್ನೆಯಿಂದ ಇವತ್ತಿನವರೆಗೂ ಇದರ ಬಗ್ಗೆ ಸಾಕಷ್ಟು ವಿವರಣೆ ತಿಳಿದುಕೊಂಡು ಇದರ ಆಳ ಏನು. ಇದರ ವ್ಯಾಪ್ತಿ ಏನು, ಸಾಧಕ ಭಾದಕಗಳು ಏನು ಎನ್ನುವುದನ್ನೆಲ್ಲಾ ಪೂರ್ಣವಾಗಿ ತಿಳಿದುಕೊಂಡು ಇದರ ಬಗ್ಗೆ ಸಮರ್ಥನೆ ಮಾಡುವುದಕ್ಕೆ ನಿಂತಿದ್ದೇನೆ. ಏನೋಫೈಲ್ ಬಂತು, ನಾಲ್ಕು ಮಾತು ಹೇಳಿ, ನಮಗೆ ಮೆಜಾರಿಟಿ ಇದೆ. ಪಾಸ್ ಮಾಡಿಕೊಂಡು ಹೋಗೋಣ ಎಂದು ನನಗೆ ಇಷ್ಟವಿಲ್ಲ. ಯಾವತ್ತೂ ನಾನು ಈ ಸಭೆಯಲ್ಲಾಗಲಿ, ಬೇರೆ ಸಭೆಯಲ್ಲಾಗಲಿ ಯಾವುದಾದರೂ ಒಂದು ವಿಷಯದ ಬಗ್ಗೆ ಪ್ರಸ್ತಾಪ ಬಂದಾಗ ಅದನ್ನು ಸಾಧನೆ ಮಾಡತಕ್ಕಂಥ ಕೆಲಸಕ್ಕೆ ನಿಂತಾಗ ಆ ವ್ಯಾಪ್ತಿಗೆ ಸಂಬಂದಪಟ್ಟ ಹಾಗೆ ವಿಚಾರ ತಿಳಿದುಕೊಂಡು ಮಾಡತಕ್ಕಂಥ ಪ್ರಯತ್ನ ಮಾಡುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪಿ. ಎಸ್. ಆಚಾರ್ಯ.—ಎಂ. ಎ ಎಕನಾಮಿಕ್ಸ್ ಎಂದು ಹೇಳಿದ್ದರಿಂದ ನಾನು ಹೇಳಬೇಕಾಗಿದೆ. ಈ ತೆರಿಗೆ ವಿಚಾರದಲ್ಲಿ "ರ್ಯಾಷನಲ್ ಟ್ಯಾಕ್ಸೇಷನ್" ಎಂಬ ಪುಸ್ತಕ ಇದೆ. ಅದನ್ನು ಓದಿದ್ದೇನೆ. ಅದರಲ್ಲಿದೆ, ಉತ್ಪಾದನೆಯಾಗುವ ವಸ್ತುವಿಗೆ ಎಕ್ಸೈಜ್ ತೆರಿಗೆ ಹಾಕತಕ್ಕಂಥದ್ದು ಕೇಂದ್ರ ಸರ್ಕಾರದ ಬೊಕ್ಕಸಕ್ಕೆ ಹೋಗತಕ್ಕಂಥಾದ್ದು ಕನ್ಸಂಪ್ಷನ್ ಟಾಕ್ಸ್ ಸೇಲ್ಸ್ ವಂಟ್ಟಿಪಾಯಿಂಟ್ ಟಾಕ್ಸ್ Tax on entry of goods intclocal areas for consumption, use or sale therein ಇದೆಲ್ಲಾ ಇದರಲ್ಲಿ ಗೊಂದಲವಿದೆ. ಇದಕ್ಕೆ ಆಧುನಿಕ ಜಗತ್ತಿನಲ್ಲಿ ಏನಾದರೂ ಜಾಗ ಇದೆಯೇ, ಇದಕ್ಕೆ ಸ್ಥಾನ ಇಲ್ಲ. ಇದನ್ನೆಲ್ಲಾ ತೆಗೆಯಬೇಕು, ಇದೆಲ್ಲಾ out date outmoded. ಏನು ಮಾಡುತ್ತಾರೆ ಎಂದರೆ ಅಲ್ಲಿ ಲಾರಿ ತಡೆದು ನಿಲ್ಲಿಸುತ್ತಾರೆ, ಅದಕ್ಕೆ ಎಂಟ್ರಿ ಟಾಕ್ಸ್ ಕೊಡಬೇಕಾಗುತ್ತದೆ. ಪರ್ಮಪರ್ಮ ಟ್ಯಾಕ್ಸ್‌ನ್ನು ವಸೂಲಿ ಮಾಡುತ್ತಾರೆ. ನಾನು ಹೇಳುತ್ತೇನೆ, ಸೇಲ್ಸ್ ಟ್ಯಾಕ್ಸ್‌ನ್ನು ಬಲಪಡಿಸಿ

ಕೊಂಡು ಇದನ್ನೆಲ್ಲಾ ಅಸೋಸಿಯೇಟ್ ಮಾಡಬಹುದು. ಈ ರೀತಿ ವಿಜಿ ಬಗೆಯ ಟ್ಯಾಕ್ಸೇಷನ್, ಮಲ್ಟಿಪಾಯಿಂಟ್ ಟ್ಯಾಕ್ಸೇಷನ್ ಇರಬಾರದು ಏಕೆಂದು ಹೇಳಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಕಾನೂನಿನಲ್ಲಿ ಇಲ್ಲದೇ ಇರುವುದನ್ನು ನಾವು ಮಾಡುವುದಕ್ಕೆ ಹೊರಟಿಲ್ಲ. ಸಂವಿಧಾನದಲ್ಲಿ ಇಲ್ಲದೇ ಇರುವುದನ್ನು ನಾವು ಮಾಡುವುದಕ್ಕೆ ಹೊರಟಿಲ್ಲ. ಮಾನ್ಯ ಆಚಾರ್ಯರು ಪ್ರೊಗ್ರೆಸಿವ್ ಟ್ಯಾಕ್ಸೇಷನ್ ಎಂದು ಹೇಳುತ್ತಾರೆ. ಪ್ರೊಗ್ರೆಸಿವ್ ಎನ್ನುವುದಕ್ಕೆ ಒಂದು ಅರ್ಥವಿದೆ. ನನಗೂ ಅವರಿಗೂ ತುಂಬಾ ಪರಿಚಯ ಇದೆ. ಪ್ರೊಗ್ರೆಸಿವ್ ಎನ್ನುವುದಕ್ಕೆ ನಮ್ಮದು ಒಂದ ಅಳತೆ ಗೋಲು, ಮಾನದಂಡ ಇದೆ ಆದರೆ ಟ್ಯಾಕ್ಸೇಷನ್ ಬಹಳ ಮುಖ್ಯವಾದಂಥ ವಿಚಾರದಲ್ಲಿ ಗೊಂದಲ ಇದೆ. ಈಗ ಇರತಕ್ಕಂಥ ಟ್ಯಾಕ್ಸ್ ಸಿಸ್ಟಮ್‌ನಲ್ಲಿ ಗೊಂದಲ ಇದೆ. ಅದನ್ನು ಸರಿಪಡಿಸುವುದಕ್ಕೆ ಇದು ಪ್ರಯತ್ನ ಅಷ್ಟೆ ಹೊಸ ಟ್ಯಾಕ್ಸ್ ಅಲ್ಲ.

ಶ್ರೀ ವಿ. ಧನಂಜಯ ಕುಮಾರ್.—ಈಗ ಸ್ಪಷ್ಟವಾಯಿತು ಇವರು ಔಷಧಿ ಡಾಕ್ಟರ್, ಅವರು ತೆರಿಗೆ ಡಾಕ್ಟರ್. ಆದರ ಬಗ್ಗೆ ಅವರು ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಪಿ. ರಾಮಚಂದ್ರರಾವ್.—ಮಾನ್ಯ ಅಧ್ಯಕ್ಷರೇ, ಈಗ ತಂಬಾಕು ಮತ್ತು ಬೀಡಿಇದೆ. ತಂಬಾಕಿನ ಒಂದು ದೊಡ್ಡ ಕಂಪನಿ ಉಂಟು. ಬೇರೆ ಬೇರೆ ಕಡೆಗಳಲ್ಲಿ ಬೀಡಿ ತಯಾರಾಗುತ್ತದೆ ಅದು ದೊಡ್ಡ ಪ್ರಮಾಣದಲ್ಲಿದೆ. ಈಗ ತಂಬಾಕು ಒಂದುಕಡೆಯಲ್ಲಿ ಸ್ಟಾಕ್ ಆಗುತ್ತದೆ. ಉದಾಹರಣೆ. ಮಂಗಳೂರಿನಲ್ಲಿ ಸ್ಟಾಕ್ ಆಗುತ್ತದೆ. ಆದನ್ನು ಮಂಗಳೂರಿಗೆ ತಂದಾಗ ಅದಕ್ಕೆ ಟ್ಯಾಕ್ಸ್ ಹಾಕಿಗೆ ತ್ತಾರೆ. ಅದೇ ತಂಬಾಕನ್ನು ಬಜ್ಪೆಯಲ್ಲಿ ಕೊಂಡು ಹೋಗಿ ಅಲ್ಲಿ ಬೀಡಿ ತಯಾರು ಮಾಡಿ ಪುನ ಮಂಗಳೂರಿಗೆ ಬರುವಾಗ ಪುನ ಟಾಕ್ಸ್ ಬೀಳುತ್ತದೆ. ಇದಕ್ಕೆ ಮಾನ್ಯ ಮಂತ್ರಿಗಳು ಏನು ಹೇಳು ತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಎಂಟ್ರಿ ಆಫ್ ಗೂಡ್ಸ್‌ಗೆ ಒಂದು ಸಲ ತೆರಿಗೆ ಅಷ್ಟೆ.

ಚೇರ್‌ಮನ್.—ಮಲ್ಟಿಪಲ್ ಟ್ಯಾಕ್ಸ್ ಹಾಕುತ್ತಾರೆ ಎಂದು ಹೇಳುತ್ತಾ ಇದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಇಲ್ಲ ಸ್ವಾಮಿ ಇಲ್ಲ.

ಶ್ರೀ ಪಿ. ರಾಮಚಂದ್ರರಾವ್.—ಒಂದೇ ಕಂಪನಿಯ ಒಂದೇ ಮಾಲಿಗೆ ಎರಡು ಸಾರಿ ಟ್ಯಾಕ್ಸ್ ಬೀಳುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಅದು ಆಗುವುದಿಲ್ಲ ಸ್ವಾಮಿ. ಈ ತಿದ್ದುಪಡಿಯಲ್ಲಿ ಅದು ಬರ ವುದಿಲ್ಲ. ಅದನ್ನು ಬೇರೆ ಸಮಯದಲ್ಲಿ ಉಪಯೋಗಿಸಿಕೊಳ್ಳಬಹುದು. ಈ ತಿದ್ದುಪಡಿಯಲ್ಲಿ ಬರುವುದಿಲ್ಲ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಆ ಅನ್ಯಾಯವನ್ನು ಸರಿಪಡಿಸುವುದಕ್ಕೆ ಬೇರೆ ಏನಾದರೂ ವ್ಯವಸ್ಥೆಮಾಡಿ.

SRI A. LAKSHMI SAGAR.—The argument that can be advanced in the matter of taxation either for or against is quite a different matter. The amending Bill's scope which is before the House is very limited. It is very well set out in the amending clause here. Beyond that there is no point in discussing and going into other aspects of the matter—whether it involves double taxation or multiple taxation, or multipoint taxation. That is not the matter that is sought to be done here. I request that this Bill be passed.

ಶ್ರೀ ವಿ. ಧನಂಜಯ ಕುಮಾರ್.—ಡಿಲೀಟಿಂಗಿಗೆ ಸರಿಯಾಗಿ ಕನ್ನಡದ ವಿವರಣೆ ಕೊಡದೇ ಇದ್ದರೆ, ಪಗ್ಯೆರೆ ಪಗ್ಯೆರೆ, ಇತ್ಯಾದಿ ಇತ್ಯಾದಿ ಎಂದು ಹೇಳಿದರೆ ಎಲ್ಲಾ ಸೇರಿಸಬಹುದು. ಅದು ಯಾವುದು ಎಂದು ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ವಕೀಲರು. ನಾನು ಇಷ್ಟು ಹೇಳುವುದಕ್ಕೆ ಇಷ್ಟಪಡುತ್ತೇನೆ. The expression in law is *Euges dem Generis*. There may be different types, different kind. different complexions, different size and different models. How are you going to define them ? Is there any law which gives description of the article that comes under taxation? It is humanly impossible. *Euges dem Generis* is the correct expression to describe it.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದು ಕನ್ನಡದಲ್ಲಿ ಏನು ಸ್ವಾಮಿ, ದಯವಿಟ್ಟು ಅಪ್ಪಣೆ ಕೊಡಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ನನ್ನ ಕಕ್ಷೀದಾರ ಹೊಗೆಸೊಪ್ಪನ್ನು ಬೀಡಿಯಾಗಿ ಉಪಯೋಗಿಸು ತ್ತಾನೆ ಹೊಗೆಸೊಪ್ಪನ್ನು ನಸ್ಯಾವನ್ನಾಗಿ ಉಪಯೋಗಿಸಬಹುದು, ಅಥವಾ ಸಿಗರೇಟ್ ಆಗಿ ಉಪಯೋಗಿಸ ಬಹುದು. ಆದುದರಿಂದ ಹೊಗೆಸೊಪ್ಪು ಎನ್ನುವುದನ್ನು ಸಿಗರೇಟ್ ವಗೈರೆ ಎನ್ನುವ ಅರ್ಥದಲ್ಲಿ ಹೇಳಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೇ, ತಮ್ಮ ಅನುಮತಿಯನ್ನು ಪಡೆದು ಒಂದು ವಿಚಾರವನ್ನು ಹೇಳಬೇಕೆಂದಿದ್ದೇನೆ. ಮಾನ್ಯ ಕೃಷ್ಣನ್‌ರವರು ನಾನು ಬಿಲ್‌ನ್ನು ಮೂವ್ ಮಾಡಿ ಹೊರಗೆ ಹೊರಟು ಹೋದೆ ಎನ್ನುತಕ್ಕ ಟೀಕೆಯನ್ನು ಮತ್ತು ಆಕ್ಷೇಪಣೆಯನ್ನು ಮಾಡಿದ್ದಾರೆಂದು ಹೇಳಿದೆ. ಆದರೆ ಮೇಲ್ಮನೆಯಲ್ಲಿ ಬಿಎಸಿ ಮೀಟಿಂಗ್ ಇದ್ದುದರಿಂದ ನಾನು ಅಲ್ಲಿಗೆ ಹೋಗಬೇಕಾಗಿ ಬಂದಿತ್ತು. ನಾನು ಅಲ್ಲಿಗೆ ಕೂಡ ಹೋಗದಿದ್ದರೆ ಅಲ್ಲೂ ಸಹ ಆಕ್ಷೇಪಣೆ ಬರುತ್ತಿತ್ತು. ಆದಕ್ಕಾಗಿ ಅನಿವಾರ್ಯವಾಗಿ ನಾನು ಇಲ್ಲಿಗೆ ಹೊರಗಡೆ ಹೋಗಬೇಕಾಗಿ ಬಂದುದರಿಂದ ಈ ಸದನಕ್ಕೆ ಈ ವಿವರಣೆಯನ್ನು ಕೊಡುವುದಕ್ಕೆ ಬಯಸುತ್ತೇನೆ.

MR. CHAIRMAN.—I will not put the consideration Motion to the vote of the House. The question is:

> "That the Karnataka Tax on entry of goods into local areas for consumption. use or sale therein (Second Amendment) Bill, 1983 be taken into consideration.

*The Motion was adopted*

**Clause by clause consideration**

**AMENDMENT TO CLAUSE 2**

SRI A. LAKSHMISAGAR (Minister for Law. Parliamentary Affairs. Public Grievances and Housing).—I beg to move;

> "That in item (iii) of Section 16-A after the word 'pots' the brackets and words" (excluding country made earthen pots)" shall be inserted."

MR. CHAIRMAN.—The question is :

> "That in item (iii) of Section 16-A after the word 'pots' the brackets and words" "(excluding country made earthen in pots)" shall be inserted."

*The motion was adopted*

CLAUSE 2

MR. CHAIRMAN.—The question is :

"That Clause 2 as amended, do stand part of the Bill."

*The motion was adopted*

*Clauses 2 as amended was added to the Bill.*

CLAUSE 1 etc.,

MR. CHAIRMAN —The question is :

"That clause 1, Long title, the preamble and the Enacting Formula do stand part of the Bill."

*The Motion was adopted*

*Clause 1 the Long Title the preamble and the Enacting Formula were added to the Bill*

*Motion to Pass :*

SRI A. LAKSHMISAGAR (Minister for Law and Parliamentary Affairs, Public Grievances and Housing).—Sir, I beg to move :

"That the Karnataka Tax on entry of goods into local are for consumption, use or sale therein (Second Amendment) Bill, 1983 as amended be passed."

MR. CHAIRMAN.—The question is :

"That the Karnataka Tax on entry of goods into local are a for consumption, use or sale therein (Second Amendment) Bill 1983 as amended be passed."

*The Motion was adopted and the Bill was passed*

**The Karnataka State Servants (Determination of Age) (Amendment) Bill, 1983.**

*Motion to consider*

SRI A. LAKSHMISAGAR (Minister for Law and Parliamentary Affairs, Public Grievences and Housing).—Sir, I beg to move :

"That the Karnataka State Servants (Determination of Age) (Amendment) Bill, 1983 be taken into considera tion."

*The question was proposed :*

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಇದರಲ್ಲಿ ಏನಾಗಿದೆ ಎಂದರೆ ಸರ್ಕಾರಿ ಕೆಲಸದಲ್ಲಿರತಕ್ಕವರು ಕೆಲಸಕ್ಕೆ ಸೇರಿದ ಮೇಲೆ ಅವರ ವಯಸ್ಸಿನಲ್ಲಿ ಏನಾದರೂ ಪಾದ ವಿವಾದ ಇದ್ದರೆ ಅದನ್ನು ಒಬ್ಬ ಅಧಿಕಾರಿಯ ಮುಂದೆ ತಾವು ಹುಟ್ಟಿದ ತಾರೀಖಿನ್ನು ಪುರಾವೆಗಳ ಸಮೇತ ಕೊಟ್ಟು ಹೇಳಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಆದರೆ ಪೈಕೋರ್ಟಿನಲ್ಲಿರತಕ್ಕ ಉದ್ಯೋಗಸ್ಥರು ಅವರ ಹುಟ್ಟಿದ ತಾರೀಖಿನಲ್ಲಿ ಏನಾದರೂ ವ್ಯತ್ಯಾಸಗಳು ಇದ್ದರೆ ಅವರು ಯಾರ ಹತ್ತಿರ ಹೋಗಬೇಕು ಎನ್ನತಕ್ಕ ಪ್ರಶ್ನೆ